# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 02.03.2017ರಂದುಅಪರಾಹ್ನ 03.00 ಗಂಟೆಗೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ 2017ನೇ ಸಾಲಿನ ಸಿಂಡಿಕೇಟಿನ ದ್ವಿತೀಯ ವಿಶೇಷ ಸಭೆಯನಡಾವಳಿಗಳು**

**ಉಪಸ್ಥಿತ ಸದಸ್ಯರು:**

**ಅನುಪಸ್ಥಿತ ಸದಸ್ಯರು:**

ಮಾನ್ಯ ಕುಲಪತಿಯವರುಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು.

## ಪ್ರಾರಂಭಿಕ

1. ಡೀನರಜೇಷ್ಠತೆ ಹಾಗೂ ಸರದಿಯ ಮೇರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ಗೆ ಸದಸ್ಯರಾಗಿ ಮಾನ್ಯ ಕುಲಪತಿಯವರಿಂದ ನಾಮ ನಿರ್ದೇಶನಗೊಂಡ ಡಾ. ಜೆ. ಈಶ್ವರ ಭಟ್, ಡೀನರು, ವಿಜ್ಞಾನ ಮತ್ತುತಂತ್ರಜ್ಞಾನ ನಿಕಾಯ ಹಾಗೂ ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ಮಾನ್ಯ ಕುಲಪತಿಯವರು ಸಭೆಗೆ ಸ್ವಾಗತಿಸಿದರು.

2. ಡೀನರಜೇಷ್ಠತೆ ಹಾಗೂ ಸರದಿಯ ಮೇರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ಗೆ ಸದಸ್ಯರಾಗಿ ಮಾನ್ಯ ಕುಲಪತಿಯವರಿಂದ ನಾಮ ನಿರ್ದೇಶನಗೊಂಡಡಾ. ವೈ. ಮುನಿರಾಜು, ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿಇವರ ಸದಸ್ಯತ್ವದಅವಧಿಯುಕೊನೆಗೊಂಡು ಸದಸ್ಯತ್ವದಿಂದ ಮುಕ್ತಗೊಂಡಿರುವ ಹಿನ್ನೆಲೆಯಲ್ಲಿಸದರಿಯವರು ಸಿಂಡಿಕೇಟ್ ಸದಸ್ಯರಾಗಿ ಸಲ್ಲಿಸಿದ ಸೇವೆಯನ್ನು ಕೃತಜ್ಞತಾಪೂರ್ವಕವಾಗಿ ದಾಖಲಿಸಲಾಯಿತು.

**ಕಾರ್ಯಸೂಚಿ ಸಂ.:**ಎಸಿಸಿವಿಸ.2:1(2017)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 35ನೇ ವಾರ್ಷಿಕ ಘಟಿಕೋತ್ಸವ ಸಂದರ್ಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾನಿಲಯದ 35ನೇ ವಾರ್ಷಿಕಘಟಿಕೋತ್ಸವದ ಸಂದರ್ಭದಲ್ಲಿಡಾ.ಬಿ.ಎ. ವಿವೇಕ ರೈಇವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಪ್ರಸ್ತಾವನೆಗೆ ಗೌರವಾನ್ವಿತ ಕುಲಾಧಿಪತಿಯವರು ಅನುಮೋದನೆ ನೀಡಿರುವುದಾಗಿ ಮಾನ್ಯ ಕುಲಪತಿಯವರು ಸಭೆಯ ಗಮನಕ್ಕೆ ತಂದರು.

**ಕಾರ್ಯಸೂಚಿ ಸಂ.:**ಪರೀಕ್ಷಾಂಗವಿಸ.1:2(2017)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 35ನೇ ಘಟಿಕೋತ್ಸವದಲ್ಲಿ ವಿವಿಧ ನಿಕಾಯಗಳ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯಅಂಗೀಕಾರ.

**ನಿರ್ಣಯ:** ಅನುಮೋದಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರುಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಕುಲಸಚಿವರು ಕುಲಪತಿಗಳು